ವರ್ಷ	ಶೇಕಡಾವಾರು ಬಡ್ಡಿ	ಗ್ರಾಹಕರ ಬಿಲ್ಲುಗಳಿಗೆ ಜಮಾ ಮಾಡಲಾದ ಬಡ್ಡಿ (ರೂ. ಕೋಟಿಗಳಲ್ಲಿ)
2010–11	6%	75.96
2011–12	6%	73.96
2012–13	9.50%	139.94
2013–14	8.50%	ವಾರ್ಷಿಕ ಲೆಕ್ಕ ಅಂತಿಮಗೊಂಡಿರುವುದಿಲ್ಲ.

(ಖ) ಈ ಹಣವನ್ನು ಆಂತರಿಕ ಸಂಪನ್ಮೂಲ ಕ್ರೂಢೀಕರಣವೆಂದು ಪರಿಗಣಿಸಿ, ಕಂಪನಿಯ ಬಂಡವಾಳ ಕಾಮಗಾರಿಗಳಿಗೆ ಉಪಯೋಗಿಸಲಾಗುವುದು.

(ಎ) ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗವು ಈ ಬಗ್ಗೆ ಯಾವುದೇ ಆದೇಶ ನೀಡಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಯಶಸ್ವಿನಿ ಆರೋಗ್ಯ ಯೋಜನೆ

907 (908); ಶ್ರೀ ಗೋಪಾಲಕೃಷ್ಣ ಕೆ.

(ಅ) ಬೆಂಗಳೂರು ನಗರದಲ್ಲಿರುವ ಸಹಕಾರ ಸಂಘಗಳೆಷ್ಟು;

(ಆ) ಇವುಗಳ ಪೈಕಿ ನೌಕರರ ಸಹಕಾರ ಸಂಘಗಳೆಷ್ಟು;

(ಇ) ಈ ಸಂಘಗಳಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು;

(ಈ) ಈ ಎಲ್ಲಾ ಸದಸ್ಯರುಗಳಿಗೆ ಯಶಸ್ವಿನಿ ಆರೋಗ್ಯ ರಕ್ಷಣಾ ಆರೋಗ್ಯ ಯೋಜನೆ ಜಾರಿಗೆ ತರಲಾಗಿದೆಯೇ;

(ಉ) ಇದಕ್ಕೆ ಆದಾಯ ಮಿತಿ ವಿಧಿಸಲಾಗಿದೆಯೇ;

(ಊ) ಸಹಕಾರ ಸಂಘಗಳಲ್ಲಿನ ಶ್ರೀಮಂತ ಸದಸ್ಯರಿಗೂ ಇದು ಅನ್ವಯ ವಾಗುತ್ತಿದೆಯೇ;

(ಋ) ಇದಕ್ಕಾಗಿ ಪಾವತಿಸಬೇಕಾದ ವಾರ್ಷಿಕ ವಂತಿಕೆ ಎಷ್ಟು;

(ಎ) ಇದಕ್ಕಾಗಿ ಸರ್ಕಾರಕ್ಕೆ ಖರ್ಚಾಗುವ ಹಣವೆಷ್ಟು;

(ಏ) ಈ ಯೋಜನೆಯನ್ನು ಸಹಕಾರಿ ಬ್ಯಾಂಕುಗಳಲ್ಲಿನ ಸದಸ್ಯರುಗಳಿಗೂ ಅನ್ವಯಿಸಲಾಗುವುದೇ;

(ಐ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು)

(ಅ) ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ನಿಬಂಧಕರು ದಕ್ಷಿಣ ವಲಯ, ಕೇಂದ್ರ ವಲಯ ಮತ್ತು ಉತ್ತರ ವಲಯರವರ ವ್ಯಾಪ್ತಿಯಲ್ಲಿ ದಿನಾಂಕ: 31.03.2014ರ ಅಂತ್ಯಕ್ಕೆ ಇದ್ದಂತೆ ಒಟ್ಟು 2150 ಸಹಕಾರ ಸಂಘಗಳು ಇರುತ್ತವೆ.

(ಆ) ಇವುಗಳ ಪೈಕಿ 325 ಸಹಕಾರ ಸಂಘಗಳು ಇರುತ್ತವೆ.

(ಇ) ಈ ಸಹಕಾರ ಸಂಘಗಳಲ್ಲಿ 4,64,834 ಸದಸ್ಯರುಗಳು ಇರುತ್ತಾರೆ.

(ಈ) ನೌಕರರ ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ ಎಲ್ಲಾ ಕಾರ್ಯನಿರತ ಸಹಕಾರ ಸಂಘಗಳ ಸದಸ್ಯರು ಯಶಸ್ವಿನಿ ಯೋಜನೆಯಡಿ ನಿಗದಿಪಡಿಸಿದ ವಾರ್ಷಿಕ ವಂತಿಕೆಯನ್ನು ಪಾವತಿಸಿ ನೊಂದಾಯಿಸಿಕೊಂಡು ಯೋಜನೆಯ ಸೌಲಭ್ಯವನ್ನು ಪಡೆಯಬಹುದು.

(ಉ) ಇಲ್ಲ.

(ಊ) ಎಲ್ಲಾ ಸದಸ್ಯರಿಗೂ ಅನ್ವಯಿಸುತ್ತದೆ.

(ಋ) ನಗರ ಯಶಸ್ವಿನಿ ಯೋಜನೆಯಡಿ ಸಾಮಾನ್ಯ ಸದಸ್ಯರಿಗೆ ` 710–00 ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ `510–00 ನ್ನು ನಿಗದಿಪಡಿಸಲಾಗಿರುತ್ತದೆ.

(ಎ) ನಗರ ಯಶಸ್ವಿನಿ ಯೋಜನೆಯ 2014–15ನೇ ಸಾಲಿಗೆ ದಿನಾಂಕ: 27.05.2014 ರಿಂದ ಜಾರಿಗೆ ತಂದಿರುವುದರಿಂದ ದಿನಾಂಕ: 15.07.2014ರವರೆಗೆ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ದಿನಾಂಕ: 15.07.2014ರವರೆಗೆ ಎಷ್ಟು ಜನ ನೋಂದಣಿ ಪಡೆಯುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಈ ಉದ್ದೇಶಕ್ಕಾಗಿ 2014–15ನೇ ಸಲಿನಲ್ಲಿ ` 10.00 ಕೋಟಿ ಅನುದಾನ ಒದಗಿಸಲಾಗಿರುತ್ತದೆ.

(ಏ) ಹೌದು, ಅನ್ವಯಿಸುತ್ತದೆ.

(ಐ) ಅನ್ವಯಿಸುವುದಿಲ್ಲ.

ಬೆಂಗಳೂರಿನಲ್ಲಿ ಹಾಪ್ ಕಾಮ್ಸ್ ಮಳಿಗೆಗಳು

908 (909); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಬೌಟ್)

(ಅ) ಬೆಂಗಳೂರಿನಲ್ಲಿರುವ ಹಾಪ್ ಕಾಮ್ಸ್ ಮಳಿಗೆಗಳೆಷ್ಟು; (ವಿಧಾನ ಸಭಾವಾರು ವಿವರ ನೀಡುವುದು)

(ಆ) ಹೊಸದಾಗಿ ಎಷ್ಟು ಮಳಿಗೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ;

(ಇ) ಎಲ್ಲೆಲ್ಲಿ ಈ ಹೊಸ ಮಳಿಗೆಗಳನ್ನು ಪ್ರಾರಂಭಿಸಲಾಗುವುದು;

(ಈ) ಹಾಪ್‌ಕಾಮ್ಸ್‌ಗಳಲ್ಲಿ ಆಗಿಂದಾಗ್ಗೆ ಹಣ್ಣು ತರಕಾರಿ ಮೇಳಗಳನ್ನು ಏರ್ಪಡಿಸಲಾಗುವುದೇ;

(ಉ) ಇಲ್ಲಿ ತೂಕದಲ್ಲಿ ಮೋಸವಾಗುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?